# 8

# ಯೇಸುವಿನ ದೈಹಿಕ ವಿಷಯಾಂಶ

ಯೇಸುವನ್ನು ಮಾನವ ಜೀವಿಯಂತೆ ನೋಡುವಾಗ, ನಾವು ಆತನನ್ನು ನಮ್ಮಲ್ಲಿ ಒಬ್ಬನಂತೆ ಯೋಚಿಸುತ್ತೇವೆ. ಮಾನವನಾಗಿರುವುದು ಎಂಬುದರ ಅರ್ಥವೇನು? ಆ ಪ್ರಶ್ನೆಗೆ ಉತ್ತರವು ಈ ಯುಗದಲ್ಲಿ ವಿಶಾಲವಾದದ್ದಾಗಿದೆ. ಆದುದರಿಂದ, ನಾವು ಜಾಗರೂಕತೆಯಿಂದ ಮುಂದುವರಿಯಬೇಕು. ಬೈಬಲನ್ನು ನಮ್ಮ ಮಾರ್ಗದರ್ಶಿಯಾಗಿ ಉಪಯೋಗಿಸುವಂತೆ ನಾವು ಈ ಅಧ್ಯಾಯದಲ್ಲಿಯ "ನಮ್ಮ ಮಾನವ ಭಾಗಗಳು" ಎಂಬ ಚಾರ್ಟನ್ನು ಉಪಯೋಗಿಸುವೆವು. ಅದರಿಂದ ನಮ್ಮ ಪ್ರಶ್ನೆಯ ಲೆಕ್ಕಾಚಾರವು ನಮ್ಮ ಮುಂದಿರುವುದು.

ಆಧುನಿಕ ಸಮಯಗಳಲ್ಲಿ ಪ್ರಗತಿಹೊಂದಿದ ಸಾಮಾಜಿಕ ವಿಜ್ಞಾನಗಳು, ವಿಶೇಷ ವಾಗಿ ಮನೋ ವಿಜ್ಞಾನವು, ಬೈಬಲಿನಲ್ಲಿ ಪ್ರತಿಬಿಂಬಿಸಲ್ಪಟ್ಟ ವ್ಯಕ್ತಿತ್ವದ ಪಾವಿತ್ರಿಕ ತತ್ವದ ಕಡೆಗೆ ಕೊನೆಗೆ ತಲುಪಿದೆ. ನಾವು ಮಾನವ ಜೀವಿಗಳಂತೆ - ಏನಾಗಿರುವೆವೋ ಅದರ ಬಹುತ್ವದ ಚಿತ್ರವು ವಿಶದವಾಗಿ ಶಾಸ್ತ್ರೀಯವಾದ ಹಿಬ್ರೂ ಪದ *nephesh*ದಿಂದ ಉದಾಹರಿಸಲ್ಪಟ್ಟಿದೆ. ಈ ಪದವು ಬಹಳವಾಗಿ ವಿಶಾಲವಾಗಿದ್ದು NIVಯಲ್ಲಿ[1] 150ಕ್ಕಿಂತ ಹೆಚ್ಚು ವಿಧಗಳಲ್ಲಿ ಭಾಷಾಂತರಿಸಲ್ಪಟ್ಟಿದೆ. ಇದು ಗ್ರೀಕ ತತ್ವ ಜ್ಞಾನದಲ್ಲಿ ಕಂಡು ಬಂದ ಮಾನವ ಕುಲದ ದ್ವಂದ ದೃಷ್ಟಿ ಕೋನಕ್ಕೆ ಸಂಪೂರ್ಣ ವಿರುದ್ಧವಾದದ್ದಾಗಿದೆ. ಚಾರ್ಟಿನಲ್ಲಿ ಸೂಚಿಸಲ್ಪಟ್ಟ ಎಲ್ಲವನ್ನೂ ಒಳಗೊಂಡಿರುವ ದೃಷ್ಟಿಕೋನವು ನಾವು ಮಾನವ ಜೀವಿಗಳನ್ನು ಅಧ್ಯಯನ ಮಾಡುವಾಗ ನಾವು ನೋಡುತ್ತಿರುವಂಥದ್ದು ಯೇಸುವಿನ ಮಾನವ ಜೀವಿತವನ್ನು ಒಳಗೊಂಡಿರುವುದು.

## ಯೇಸುವಿನ ದೇಹ

ಮಾನವ ದೇಹದೊಂದಿಗೆ ಜಗತ್ತಿನಲ್ಲಿ ಯೇಸುವು ತಲುಪಿದನು. ಆತನ ಕಾಣಿಸಿಕೊಳ್ಳುವಿಕೆಯು ಆಶ್ಚರ್ಯಕರವಾದದ್ದಾಗಿರುವದಿಲ್ಲ. ಆರೋಗ್ಯವಂತ ಮಗುವಿನಲ್ಲಿ ಕಂಡುಕೊಳ್ಳುವ ಎಲ್ಲಾ ದೈಹಿಕ ಲಕ್ಷಣಗಳು ಆತನಲ್ಲಿ ಇದ್ದವು. ಗರ್ಭದಲ್ಲಿ ಸುಮಾರು ಒಂಭತ್ತು ತಿಂಗಳ ನಂತರ ಜನನಗಳು ನಿರೀಕ್ಷಿಸಲ್ಪಟ್ಟಂತೆಯೇ ಆತನ ಜನನವು ನಿರೀಕ್ಷಿಸಲ್ಪಟ್ಟಿತು. ಆತನು ಸಂತೋಷದಿಂದ ಸ್ವೀಕರಿಸಲ್ಪಟ್ಟನು ಹಾಗೂ ಬೆಳೆಸಲ್ಪಟ್ಟನು. ಆತನ ಜನನದ ನಂತರ ಎಂಟನೆಯ ದಿನದಂದು ಆತನಿಗೆ ಸುನ್ನತಿಯಾಯಿತು ಮತ್ತು ಯೇಸು ಎಂದು ಹೆಸರಿಡಲ್ಪಟ್ಟಿತು. ಆತನ ಮಾನವ ದೇಹವು ವರ್ಷಗಳು ದಾಟಿದಂತೆ ಬಲವಾಗಿ ಬೆಳೆಯಿತು. ಆತನು ಎತ್ತರದಲ್ಲಿ ಬೆಳೆ ದನು. ಚೆನ್ನಾದ ಹೊಂದಾಣಿಕೆಯಲ್ಲಿ, ಪೂರ್ಣ ಬೆಳೆದ ಮನುಷ್ಯನಾಗಿ ಪ್ರೌಢಾವಸ್ಥೆಗೇರಿದನು. ಸುಮಾರು ಮೂವತ್ತು ವರ್ಷ ಪ್ರಾಯದವನಾದಾಗ ಯೇಸುವು ತನ್ನ ದೇಹವನ್ನು ತನ್ನ ಸಂಬಂಧಿಯಾದ ಯೋಹಾನನಿಗೆ ಯೊರ್ದನ್ ಹೊಳೆಯಲ್ಲಿ ಬಾಪ್ತಿಸ್ಮಕ್ಕಾಗಿ ಒಪ್ಪಿಸಿಕೊಟ್ಟನು (ಲೂಕ 2:4-7, 21, 40, 51, 52; 3:23; ಮತ್ತಾಯ 3:13-15).

ತನ್ನ ವೈಯಕ್ತಿಕ ಸೇವೆಯಲ್ಲಿ ಯೇಸುವು ತನ್ನ ದೇಹವು ನಮ್ಮೆಲ್ಲರಿಗೆ ಸಾಮಾನ್ಯ

ವಾಗಿರುವ ದೈಹಿಕ ಪ್ರಭಾವಗಳಿಗೆ ಒಳಪಟ್ಟಿರುವದನ್ನು ತೋರಿಸಿದನು. ಆತನು ಆಯಾಸಗೊಂಡನು ಮತ್ತು ಬಾಯಾರಿಕೆ ಹೊಂದಿದನು. ಯೇಸುವಿನ ಹೆಚ್ಚಾದ ಪ್ರಯಾಣಗಳು ಕಾಲ್ನಡಿಗೆಯವುಗಳಾಗಿದ್ದವು. ಅಂಥ ಒಂದು ಪ್ರಯಾಣದಲ್ಲಿ ಆತನು ಆಯಾಸಗೊಂಡನು. ನೀರನ್ನು ಕುಡಿಯಲು ಬಯಸಿದನು. ಸಮಾರ್ಯದಲ್ಲಿ ಸುಖರ ಎಂಬ ಗ್ರಾಮದಲ್ಲಿ ಯಾಕೋಬನ ಬಾವಿಗೆ ಆತನು ಬಂದಾಗ ಮಧ್ಯಾಹ್ನವಾಗಿತ್ತು. ವಿಶ್ರಾಂತಿ ಪಡೆಯಲು ಅಲ್ಲಿ ನಿಂತುಕೊಂಡನು, ನೀರಿಗಾಗಿ ಕಾದುಕೊಂಡಿದ್ದನು. ಕೊನೆಗೆ ಗ್ರಾಮದ ಒಬ್ಬ ಮಹಿಳೆ ನೀರನ್ನು ಸೇದಿಕೊಳ್ಳಲು ಬಂದಳು. ಯೆಹೂದ್ಯರು ತಮ್ಮನ್ನು ಅಶುದ್ಧರು ಎಂದು ಯೋಚಿಸುತ್ತಿದ್ದಾರೆಂಬುದನ್ನು ಸಮಾರ್ಯದವರು ತಿಳಿದದ್ದರಿಂದ "ಕುಡಿಯಲು ನನಗೆ ನೀರು ಕೊಡು" (ಯೋಹಾನ 4:7) ಎಂದು ಯೇಸು ಕೇಳಿದಾಗ ಆಕೆಗೆ ಆಶ್ಚರ್ಯವಾಯಿತು.

ಯೋಹಾನನಲ್ಲಿ ಮಾತ್ರವೇ ನಮೂದಿಸಲ್ಪಟ್ಟಿದ್ದರೂ ಈ ಘಟನೆಯು ಯೇಸುವಿನ ಜೀವಿತದಲ್ಲಿ ಪರಿಚಯವುಳ್ಳದ್ದಾಗಿರುವುದು. ಮಹಿಳೆಯೊಂದಿಗೆ ಮತ್ತು ಗ್ರಾಮದ ಸಮಾರ್ಯದವರೊಂದಿಗೆ ಯೇಸುವು ಹಂಚಿಕೊಂಡ ಆಶ್ಚರ್ಯಕರವಾದ ಬೋಧನೆಯು ಇದಕ್ಕೆ ಕಾರಣವಾಗಿದೆ. ನಾವು ಸಮಾರ್ಯರೊಂದಿಗೆ ನಿಂತುಕೊಂಡು ಈ ಮನುಷ್ಯನು ಆಯಾಸದಿಂದ ಬಾಯಾರಿಕೆಯುಳ್ಳವನಾಗಿ ಬಂದಾತನು. ಆತನನ್ನು ಒಬ್ಬ ಪ್ರವಾದಿಯಂತೆ ಇಲ್ಲವೇ ಮೆಸ್ಸೀಯನಂತೆ ನೋಡಲು ಪ್ರಾರಂಭಿಸುವ ರೀತಿಯಲ್ಲಿ ಬೋಧಿಸುವದನ್ನು ಕೇಳುವಾಗ ಈ ಘಟನೆಯು ಇನ್ನೂ ಹೆಚ್ಚು ಪರಿಣಾಮ ಮಾಡುವಂಥದ್ದಾಗಿದೆ. ಆತನ ಹೆಸರು *Yeshua'* (ಯೇಸುವಿಗಾಗಿ ಹಿಬ್ರೂ ಪದ - ರಕ್ಷಕ). ನಮಗೆ ಆಶ್ಚರ್ಯಕರವಾದ ಅರ್ಥ ಕೊಡುತ್ತದೆ. *Yhoshua'* (ಯೆಹೋಶುವ ಎಂಬುದಕ್ಕೆ ಹಿಬ್ರೂ ಪದ - ದೇವರು ರಕ್ಷಿಸುತ್ತಾನೆ) ಆದಿಕಾಲದಲ್ಲಿ ಇಬ್ರಿಯರಿಗೆ ಅರ್ಥ ಕೊಟ್ಟಂತೆ ಇದು ಇರುತ್ತದೆ (ಯೋಹಾನ 4:4-42).

ಯಾತನೆ ಮತ್ತು ಮರಣ ಎಂಬುವು ಮಾನವ ಕುಟುಂಬದ ಸದಸ್ಯರಲ್ಲಿ ಎರಡು ಅಪ್ರಿಯವಾದ ಸಾಮಾನ್ಯ ಸಂಗತಿಗಳು. ದೇವರ ಕುಟುಂಬದ ಸದಸ್ಯರಂತೆ, ಸಭೆಯಂತೆ ನಾವು ನಂಬಿಗಸ್ತರಾಗಿದ್ದರೆ ಸಹಿಸಲಿಕ್ಕೆ ಶ್ರಮೆಯಿರುವದರ ಭರವಸೆ ನಮಗಿರುವುದು. ಹಾಗೆಯೇ ಕರ್ತನು ಮೊದಲು ಬಂದರೆ ಮಾತ್ರ - ಮರಣ ಬರುವದನ್ನು ನಾವು ತಪ್ಪಿಸಿಕೊಳ್ಳುವೆವು (ಇಬ್ರಿಯ 9:27).

ದೇವರ ವಾಕ್ಯವನ್ನು ನಾವು ಓದುವಾಗ, ಯೇಸುವು ಈ ಎರಡು ಅನುಭವಗಳಿಂದ ಹೊರತು ಪಡಿಸಲಿಲ್ಲವೆಂದು ನಾವು ಕಂಡು ಕೊಳ್ಳುತ್ತೇವೆ. ಆತನು ಮಾನವತೆಯ ಈ ಎರಡು ಗುರುತುಗಳನ್ನು ಅನುಭವಿಸುವ ಎಲ್ಲಾ ಜನರ ಮುಂದೆ ನಿಲ್ಲುತ್ತಾನೆಂಬುದನ್ನು ಸಮೀಪದಿಂದ ಓದುವುದು ತೋರಿಸುತ್ತದೆ. ಜೀವ ಶಾಸ್ತ್ರಕ್ಕೆ ಸಂಬಂಧಿಸಿ ಮಾತಾಡುವಾಗ, ಆತನ ವೇದನೆಯು ಗೆತ್ಸೇಮನೆ ತೋಟದಲ್ಲಿ ಆತನ ದೇಹದ ಬೆವರು ರಕ್ತದ ಹನಿಗಳು ನೆಲಕ್ಕೆ ಬೀಳುತ್ತಿರುವಷ್ಟರ ಮಟ್ಟಿಗೆ ಇತ್ತೆಂದು ಹೇಳ ಬಹುದು. ಎಂಥಾ ವೇದನೆ! (ನೋಡಿರಿ 1 ಪೇತ್ರ 4:12-16; ಲೂಕ 22:44).

ಶಿಲುಬೆಯ ಮೇಲಿನ ಯೇಸುವಿನ ಮರಣವು ಮಾನವ ಚರಿತ್ರೆಯಲ್ಲಿ ವಿಶೇಷವಾದದ್ದಾಗಿದೆ. ಈ ಘಟನೆಯು ಅನಂತರದ ಪುನರುತ್ಥಾನದೊಂದಿಗೆ ನಿರ್ಧಾರದ ಸಂಗತಿಯಾಗಿದೆ. ನಮ್ಮ ಅಂತಿಮ ಸ್ಥಿತಿಯು ಅದರ ಮೇಲೆ ಆಧಾರಗೊಂಡಿದೆ. ಕ್ರಿ.ಪೂ. ಮತ್ತು ಕ್ರಿಸ್ತ ಶಕ (B.C. ಹಾಗೂ A.D.) ಎಂಬ ನಮ್ಮ ಉಪಯೋಗದಿಂದ ಶಿಲುಬೆಯ ಕೇಂದ್ರತೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಘಟನೆಯ ಮೊದಲು ಮತ್ತು ಅನಂತರ ಅದು ಸಮಯದ ಎಲ್ಲಾ ಶತಕಗಳಲ್ಲಿ ದಾಟಿಹೋಗುತ್ತದೆ. ಶಿಲುಬೆಯ

ಮೇಲಿನ ಯೇಸುವಿನ ಮರಣವು ಆತನ ಮಾನವತೆಯ ಅತೀ ಸ್ಪಷ್ಟವಾದ ಪುರಾವೆಯಾಗಿದೆ. ಆತನು ಮರಣಹೊಂದಿದ ನಂತರ, ಆತನ ಮೃತ ದೇಹವು ಶಿಲುಬೆಯಿಂದ ಇಳಿಸಲ್ಪಟ್ಟಿತು. ಅವಸರದಿಂದ ಹೂಣಿಡುವಿಕೆಗಾಗಿ ಸಿದ್ಧಪಡಿಸಲ್ಪಟ್ಟಿತು ಮತ್ತು ಸಮಾಧಿಯಲ್ಲಿ ಇಡಲ್ಪಟ್ಟಿತು (ಮತ್ತಾಯ 27:50; ಯೋಹಾನ 19:28, 30; ಲೂಕ 23:46, 50-53).

## ಯೇಸುವಿನ ಭಾವನೆಗಳು

ನಾವು ಆನಂದಿಸಬಹುದಾದ ಭಾವನೆಗಳನ್ನು ಯೇಸುವು ವ್ಯಕ್ತಪಡಿಸಿದನು. ನಾವು ಮಾನವರಾಗಿರುವದರಿಂದ ಮತ್ತು ಆತನು ಮಾನವನಾಗಿದ್ದುದರಿಂದ ಈ ಸಿದ್ಧವಾದ ಸಂಬಂಧವು ಆಶ್ಚರ್ಯಕರವಾದ ರೀತಿಯಲ್ಲಿ ಬರುವದಿಲ್ಲ. ಆತನು ಮಾನವನಾಗಿರದಿದ್ದರೆ ಮಾತ್ರ ಅದು ಆಶ್ಚರ್ಯಕರವಾದದ್ದಾಗಿರುತ್ತಿತ್ತು. ಹಾಗಿದ್ದರೂ ಆತನ ದೈವತ್ವದ ಉದಾಹರಣೆಗಾಗಿ ಇಲ್ಲವೇ ಯಾವುದೇ ಪ್ರತ್ಯೇಕವಾದ ಬೋಧನೆಗಾಗಿ ನಾವು ಹುಡುಕುವಾಗ ಆತನ ಮಾನವತೆಯ ಈ ಪುರಾವೆಗಳ ಮೇಲೆ ಓದುವುದು ಸುಲಭವಾಗುತ್ತದೆ. ಮಾನವನಂತೆ ಯೇಸುವಿನ ಮಾನಸಿಕ ವ್ಯಕ್ತಿಪಡಿಸುವಿಕೆಗಳ ಈ ಕೆಳಗಿನ ಉದಾಹರಣೆಗಳನ್ನು ಯೋಚಿಸೋಣ. ನಾವು ಆತನ ಸಮೀಪಕ್ಕೆ ಎಳೆಯಲ್ಪಡುವೆವು.

### ಆತನ ಪ್ರೀತಿ

ಪ್ರೀತಿಯನ್ನು ನಾವು ಮೊದಲು ಗಮನಿಸುತ್ತೇವೆ, ಯಾಕಂದರೆ ಅದು ಮೊದಲನೆಯದಾಗಿದೆ. ನಿಜವಾದ ಪ್ರೀತಿಯು ಮಾನವ ಆತ್ಮದ ಅತ್ಯುನ್ನತವಾದ ವ್ಯಕ್ತಪಡಿಸುವಿಕೆಯಾಗಿದೆ, ಯಾಕಂದರೆ ಅದು ಮಾನವ ಜೀವಿಯು ಪ್ರೀತಿಸ್ವರೂಪನಾದ ದೇವರ ಹೋಲಿಕೆಯಲ್ಲಿ ಮಾಡಲ್ಪಟ್ಟ ಜೀವಿಯಾಗಿದ್ದಾನೆ. ಪ್ರೀತಿಸಲಿಕ್ಕೆ ನಮ್ಮ ಅರ್ಹತೆಯ ಆಳವಾದ ವ್ಯಕ್ತಪಡಿಸುವಿಕೆಯು ದೇವರ ಸೃಷ್ಟಿಸಲ್ಪಟ್ಟ ಜೀವದ ರೂಪಗಳ ಶಿಖರದಲ್ಲಿ ನಮ್ಮನ್ನು ಇಡುತ್ತದೆ. ಈ ಸಾಮರ್ಥ್ಯವಿಲ್ಲದೆ, ನಾವು ಸಂಪೂರ್ಣವಾಗಿ ಮಾನವರಾಗಿರಲಾರೆವು.

ಒಂದು ಸಂದರ್ಭದಲ್ಲಿ ಒಬ್ಬ ಐಶ್ವರ್ಯವಂತನು ನಿತ್ಯಜೀವದ ಕೆಲವು ಪ್ರಶ್ನೆಗಳೊಂದಿಗೆ ಯೇಸುವಿನ ಬಳಿಗೆ ಬಂದನು. ಯೇಸುವು ಇದನ್ನೇ ಕೊಡಲು ಬಂದದ್ದರಿಂದ ಸಂಭಾಷಣೆಯಲ್ಲಿ ಮನುಷ್ಯನನ್ನು ತೊಡಗಿಸಲು ಆತನು ಮನಸ್ಸುಳ್ಳವನಾಗಿರುವದರಲ್ಲಿ ನಾವು ಕೂಡಲೇ ಮೆಚ್ಚಿಕೊಳ್ಳಬಹುದು. ಸಂಪೂರ್ಣ ತಿಳುವಳಿಕೆಯನ್ನು ಬದಲಾಯಿಸಿಕೊಳ್ಳಲಿಕ್ಕೆ ಬೀಗದ ಕೈ ಈ ಹೇಳಿಕೆಯಲ್ಲಿ ಕಂಡು ಬರುತ್ತದೆ: “ಆತನ ಕಡೆಗೆ ನೋಡುವಾಗ, ಯೇಸು ಆತನಿಗಾಗಿ ಪ್ರೀತಿ ತುಂಬಿದವನಾದನು” (ಮಾರ್ಕ 10:21ಎ; ನೋಡಿರಿ 1 ಯೋಹಾನ 4:8; ಯೋಹಾನ 11:5).

ಯೇಸುವಿನ ಗಲಿಲಾಯದ ಸೇವೆಯ ಸಮಯದಲ್ಲಿ ಆತನು ಅಪೊಸ್ತಲರಾಗಿ ಹನ್ನೆರಡು ಜನರನ್ನು ಆಯ್ದುಕೊಂಡನು. ಆ ಸಮಯದಿಂದ, ಈ ಜನರಿಗೆ ಬೋಧನೆ ಮತ್ತು ತರಬೇತಿಯು ಆತನ ಕೆಲಸದ ಮುಖ್ಯವಾದ ಭಾಗವಾಗಿತ್ತು. ಅದು ಆಹ್ವಾನಿಸುವ ಬೋಧನೆಯಾಗಿತ್ತು. ಆತನು ಅವರಿಗೆ ಬೋಧಿಸಿದಂತೆ, ಪೋಷಿಸಿದಂತೆ, ಶಿಕ್ಷಿಸಿದಂತೆ, ಬೆಳಕನ್ನು ಕೊಟ್ಟಂತೆ ಮತ್ತು ಖಂಡಿಸಿದಂತೆ ಅವರೊಂದಿಗೆ ಆಶ್ಚರ್ಯಕರವಾದ ತಾಳ್ಮೆಯನ್ನು ಪ್ರದರ್ಶಿಸಿದನು. “ವೇಳಾಪಟ್ಟಿಯ” ಅಂತ್ಯದ ಸಮೀಪಕ್ಕೆ ಆತನು ಬಂದಾಗ

ಆತನು ತನ್ನ ಕಾರ್ಯವನ್ನು ಅನುಸರಿಸುತ್ತಿದ್ದನು.

ಆತನು ತನ್ನ ಕಾರ್ಯವನ್ನು ಅನುಸರಿಸುತ್ತಿದ್ದನು. ಹತಸಾಕ್ಷಿಗಳಾಗಬೇಕಿದ್ದರೂ ಹನ್ನೊಂದು ಜನರ ಜೀವಿತಗಳನ್ನು ರೂಪಿಸಲು ಆತನು ಶಕ್ತನಾದನು ಎಂದು ಪರಿಶುದ್ಧ ಬರಹವು ಹೇಳುತ್ತದೆ. ಕೊನೆಗೆ ವಿಶೇಷವಾದ ಪಸ್ಕ ಹಬ್ಬವು ಸಮೀಪಿಸಿದಾಗ, ಯೇಸುವಿನ ಬಗ್ಗೆ ಯೋಹಾನನು ಹೀಗೆ ಬರೆದನು: "ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು" (ಯೋಹಾನ 13:1ಬಿ; NIV). ಆತನ ಪ್ರೀತಿಯ ಪರಿಪೂರ್ಣತೆಯು ಯಾವುದಾಗಿತ್ತು? ಗೆತ್ಸೇಮನೆಯಲ್ಲಿ ಯೇಸುವಿನ ವೇದನೆಯ ಬಗ್ಗೆ ಹಾಗೂ ಶಿಲುಬೆಯ ಮೇಲಿನ ಮರಣದ ಬಗ್ಗೆ ಈ ಮೊದಲು ಮಾತಾಡಿದ್ದೇವೆ. ಅದು ವೇದನೆಯಾಗಿತ್ತು. "ದೇವರು ಲೋಕವನ್ನು ಎಷ್ಟೋ ಪ್ರೀತಿಸಿ ತನ್ನ ಒಬ್ಬನೇ ಕುಮಾರನನ್ನು ಕೊಟ್ಟನು ..." (ಯೋಹಾನ 3:16) ಅಷ್ಟರ ಮಟ್ಟಿಗೆ ಪ್ರೀತಿಸಿದಾತನಿಂದ ಪ್ರೀತಿಯ ಪ್ರಕಟಣೆ ಅದಾಗಿತ್ತು. ಯೇಸುವಿನ ಮರಣವು "ಅವರಿಗೆ ಆತನ ಪ್ರೀತಿಯ ಪರಿಪೂರ್ಣತೆಯನ್ನು ತೋರಿಸಿತು." ಶಿಲುಬೆಯ ಮೇಲೆ ಯೇಸುವಿನ ಮರಣವು ಜಗತ್ತು ಯಾವಾಗಲೂ ತಿಳಿದಂಥ ಮಾನವ ಪ್ರೀತಿಯ ಅತೀ ದೊಡ್ಡದಾದ ವ್ಯಕ್ತಪಡಿಸುವಿಕೆಯಾಗಿತ್ತು. ಯಾಕಂದರೆ ಅದು ತಂದೆಯಾದ ದೇವರ ಪ್ರೀತಿಯ ಪರಿಪೂರ್ಣವಾದ ವಿಧಾನವಾಗಿತ್ತು.

ಪರಿಪೂರ್ಣ ಪ್ರೀತಿಯು ತುಂಬಿರುವಾಗ ಆನಂದಕ್ಕಾಗಿ ಪ್ರತಿಯೊಂದು ಕಾರ್ಯವಿರುವುದು. ಯೇಸುವು ಪ್ರೀತಿ ಮತ್ತು ಆನಂದದ ಬಗ್ಗೆ ಒಟ್ಟಾಗಿ ಹೇಳಿದನು. ಆಯ್ದುಕೊಂಡ ಅಪೊಸ್ತಲರಿಗೆ "ನನ್ನಲ್ಲಿರುವ ಆನಂದವು ನಿಮ್ಮಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸ ಬೇಕೆಂಬುದೇ ನಾನು ಕೊಡುವ ಆಜ್ಞೆಯಾಗಿದೆ" (ಯೋಹಾನ 15:9-12) ಎಂದು ಯೇಸುವು ಹೇಳಿದನು. ಯೇಸುವು ಪ್ರೀತಿಯನ್ನೂ ಆನಂದವನ್ನೂ ತನ್ನ ಜೀವಿತದಲ್ಲಿ ಪ್ರದರ್ಶಿಸಿದನು. ಆತನು ಅದಕ್ಕಿಂತ ಹೆಚ್ಚಾದದ್ದನ್ನೂ ಮಾಡಿದನು. ಆತನು ಪ್ರೀತಿ ಮತ್ತು ಆನಂದಗಳಿಗೆ ಅವುಗಳ ಅಂತಿಮ ಅರ್ಥಗಳನ್ನು ಕೊಟ್ಟನು.

**ಆತನ ಕನಿಕರ**

ಕನಿಕರವು ಅತಿಯಾಗಿ ಸಹಿಸಿಕೊಳ್ಳುವ ಮಾನವ ಗುಣಲಕ್ಷಣಗಳಲ್ಲಿ ಒಂದಾಗಿದೆ. ನಮ್ಮಿಂದ ಹೊರಗೆ ನಮ್ಮ ಮಾನವತೆಯನ್ನು ಪ್ರಕಟಿಸಲು ನಮ್ಮ ಸಾಮರ್ಥ್ಯದ ಸಂಕೇತ ಅದಾಗಿದೆ. ಕನಿಕರವು ಅರ್ಥಗರ್ಭಿತವಾದ ಸಂಬಂಧವನ್ನು ಬೆಳಸುವದರಲ್ಲಿ ಕಟ್ಟುವ ಇಟ್ಟಿಗೆಗಳಲ್ಲಿ ಒಂದಾಗಿದೆ. ನಮ್ಮ ಜೀವಿತಗಳಲ್ಲಿ ಕನಿಕರದ ಪಾತ್ರದ ಮಹತ್ವವನ್ನೂ ಆತನಿಗಾಗಿರುವ ನಮ್ಮ ಸೇವೆಯ ಬಗ್ಗೆ ಹೇಗೆ ಅದು ಹೆಚ್ಚಾಗಿ ಹೇಳುತ್ತದೆಂಬುದನ್ನು ಯೇಸುವು ಒತ್ತಿ ಹೇಳಿದನು. ಹಸಿದವರಿಗೆ ಊಟಕೊಡುವದನ್ನು, ಬಾಯಾರಿದವರಿಗೆ ನೀರು ಕೊಡುವದನ್ನು, ಅಪರಿಚಿತರಿಗೆ ಆತಿಥ್ಯವನ್ನು, ನಗ್ನರಿಗೆ ಬಟ್ಟೆಯನ್ನು ಹೊದಿಸುವದನ್ನು, ಸೆರೆಯಲ್ಲಿರುವವರನ್ನು ಸಂದರ್ಶಿಸುವದನ್ನು ಕುರಿತಾದದ್ದರ ಬಗ್ಗೆ ಆತನು ಮಾತನಾಡಿದನು. ಅಂಥ ಕಾರ್ಯಗಳು ತನಗೆ ಸೇವೆಯಾಗಿರುವವೆಂದು ಯೇಸು ಹೇಳಿದನು, ಇನ್ನೊಂದು ಕಡೆಯಲ್ಲಿ ಕಠಿಣವಾದ ಹೃದಯಗಳುಳ್ಳವರು ಕೆಟ್ಟದಾದ ಅಂತ್ಯಕ್ಕೆ ಬರುವರು ಎಂದು ಯೇಸು ಹೇಳಿದನು (ಮತ್ತಾಯ 25:34-46).

ಯೇಸುವಿನ ವೈಯಕ್ತಿಕ ಸೇವೆಯ ಪ್ರಮುಖ ಗುರುತು ಕನಿಕರವಾಗಿತ್ತು. ಕುಷ್ಠರೋಗಿಯನ್ನು ನೋಡಿ ಅವನ ಮೇಲೆ ಕನಿಕರಪಟ್ಟನು. ಅನೇಕ ರೋಗಿಗಳೊಂದಿಗೆ ಇದ್ದ

ಮಹಾ ಸಮೂಹವನ್ನು ನೋಡಿ, ಅವರ ಮೇಲೆ ಆತನು ಕನಿಕರಗೊಂಡನು. ದ್ವೇಷಿಸಲ್ಪಟ್ಟ ಸಹಾಯವಿಲ್ಲದ, ಅಲೆಯುತ್ತಿದ್ದ ಇನ್ನೊಂದು ಜನರ ಗುಂಪುಗಳನ್ನು ನೋಡಿ ಅವರ ಮೇಲೆ ಆತನು ಕನಿಕರಪಟ್ಟನು. ಕನಿಕರವಿಲ್ಲದೇ ಆತನ ಸೇವೆಯನ್ನು ಯೋಚಿಸುವುದು ಕಷ್ಟಕರವಾದದ್ದಾಗುತ್ತದೆ.

ಕನಿಕರವು ಇನ್ನೊಬ್ಬನ ಇಲ್ಲವೇ ಇತರರ ವೈಯಕ್ತಿಕ ಅವಘಡಗಳ "ಆತ್ಮಿಕ ಮನಸ್ಸಾಕ್ಷಿಯಂತೆ" ಮತ್ತು ಅದರ ಕಡೆಗೆ ನಿರ್ದೇಶಿಸಿದ ಸ್ವಾರ್ಥರಹಿತ ಮೃದುವಾಗಿರುವಿಕೆಯಂತೆ ನಿರೂಪಿಸಲ್ಪಟ್ಟಿದೆ. ಕೊಳೆಯಲ್ಲಿ ನಡೆದಾಡಿದ ವ್ಯಕ್ತಿಯು ಬೀದಿಯ ಪಕ್ಕದಲ್ಲಿ, ಒರಟಾದ ಅಕ್ಷರಗಳಿಂದ ರಟ್ಟಿನ ಮೇಲೆ, "ಆಹಾರಕ್ಕಾಗಿ ಕೆಲಸ ಮಾಡುತ್ತೇನೆ" ಎಂದು ಬರೆದ ಬೋರ್ಡನ್ನು ಹಿಡಿದು ಕೊಂಡು ನಿಂತಿರುವದನ್ನು ನೋಡಿರುವಿರೋ? ದೂರದರ್ಶನ ವಾರ್ತೆಯಲ್ಲಿ ರಕ್ತ ಸುರಿಯುತ್ತಿರುವ, ಜೀವವಿಲ್ಲದ, - ಅಮಾನುಷವಾಗಿ ಕೊಲ್ಲಲ್ಪಟ್ಟ ಯುದ್ಧದ ಅರ್ಥರಹಿತ ಕೊಲ್ಲುವಿಕೆಯಲ್ಲಿ ಕೊಲ್ಲಲ್ಪಟ್ಟ ತನ್ನ ಮಗುವಿನ ದೇಹವನ್ನು ಹಿಡಿದುಕೊಂಡ ಹುಚ್ಚಿಯಂತಿರುವ ತಾಯಿಯನ್ನು ನೋಡುವಾಗ - ನಾವು "ಕನಿಕರವುಳ್ಳವರಾಗುತ್ತೇವೆ," ನಾವು ಮಾನವರಾಗಿರುವದರಿಂದ ಸಂಕಷ್ಟದಲ್ಲಿರುವವರಿಗಾಗಿ "ಮರುಕಗೊಳ್ಳುತ್ತೇವೆ." ಯೇಸುವಿನಲ್ಲಿಯೂ ಈ ಭಾವನೆಗಳಿದ್ದವು. ಆದರೆ ಆತನು ಅದಕ್ಕಿಂತ ಮುಂದೆ ಹೋದನು. ಅಂಥ ಭಾವನೆಗಳನ್ನು ಆತನು ಅತ್ಯುನ್ನತಕ್ಕೆ ಏರಿಸಿದನು. ಇತರರ ಸಂಕಷ್ಟಗಳನ್ನೂ ಶ್ರಮೆಯನ್ನೂ ತೆಗೆದು ಹಾಕಿದನು. ಆತನ ಮಾನವತೆಯು ಸ್ಪಷ್ಟಪಡಿಸಲ್ಪಟ್ಟಿತು (ಮಾರ್ಕ 1:40, 41; 6:34; ಮತ್ತಾಯ 9:36; 14:14).

**ಆತನ ರೋಷ**

ವಿರೋಧಾಭಾಸವಾಗಿ, ಯೇಸುವಿನ ಕನಿಕರವು ಆತನ ರೋಷದ ಪಕ್ಕ ಪಕ್ಕದಲ್ಲಿಯೇ ಕಂಡು ಬರುತ್ತದೆ. ಆತನ ರೋಷವು ಆತನನ್ನು ಕೀಳಾಗಿ ನೋಡಿದವರ, ಅವಮಾನ ಮಾಡಿದವರ ಹಾಗೂ ಘಾಯಗೊಳಿಸಿದವರ ವಿರೋಧವಾಗಿ ಇರಲಿಲ್ಲ, ಧಾರ್ಮಿಕ ನಿಯಮಗಳನ್ನು ಆತನು ಮೀರುತ್ತಾನೆಂದು ತೋರಿದಾಗ ಆತನು ಅಂಗವಿಕಲನಿಗೆ ಸಹಾಯ ಮಾಡಿದ್ದನ್ನು ಸಹಿಸದೇ ಕನಿಕರವಿಲ್ಲದವರ ಕಡೆಗೆ ಆತನ ರೋಷವಿತ್ತು, ಉದಾಹರಣೆಯಾಗಿ, ಸಬ್ಬತ್ ದಿನದಂದು ಆತನು ಸಭಾ ಮಂದಿರದಲ್ಲಿದ್ದಾಗ, ಬತ್ತಿಹೋದ ಕೈಯುಳ್ಳ ಮನುಷ್ಯನನ್ನು ಕಂಡನು, ಜನರ ಮುಂದೆ ನಿಂತುಕೊಳ್ಳಬೇಕೆಂದು ಯೇಸು ಅವನಿಗೆ ಹೇಳಿದನು. ಸಬ್ಬತ್ ದಿನದಂದು ಮನುಷ್ಯನನ್ನು ಗುಣಪಡಿಸುವುದು ಸ್ವೀಕಾರ ಯೋಗ್ಯವಾದದ್ದೋ ಎಂದು ಆತನು ಅವರನ್ನು ಕೇಳಿದನು, ಅವರು ಉತ್ತರ ಕೊಡದೇ ಇದ್ದಾಗ ಆತನು ಅವರ ಕಡೆಗೆ "ದುಃಖ ಪಟ್ಟು ಶೋಕದಿಂದ" ನೋಡಿದನು (ಮಾರ್ಕ 3:1-6). ಕನಿಕರಕ್ಕಾಗಿ ಸ್ಥಳವಿಲ್ಲದ ಧಾರ್ಮಿಕ ವ್ಯಕ್ತಿಗಳ ಕಡೆಗೆ ಆತನು ರೋಷವುಳ್ಳವನಾಗಿದ್ದನು. ಅವರು ತಪ್ಪಾಗಿದ್ದರು, ಆತನು ಸರಿಯಾಗಿದ್ದನು. ಅವರಿಗೆ ಕಠಿಣವಾದ ಹೃದಯಗಳಿದ್ದವು, ಆತನಿಗೆ ಕನಿಕರವಿತ್ತು.

**ಆತನ ಕುತೂಹಲ**

ಯೇಸುವಿನ ನಿಜವಾದ ಮಾನವತೆಗಾಗಿ ಅತೀ ಹೆಚ್ಚಾದ ತೀರ್ಮಾನಗಳ ಕೆಲವು ಪುರಾವೆಗಳು ಆತನ ಕುತೂಹಲದ ತೋರಿಕೆಯಲ್ಲಿ ಕಂಡುಬಂದಿತು.

ಯೇಸುವಿನ ಮಾನವತೆಯು "ವ್ಯಕ್ತಿ ಸಂಬಂಧವಿಲ್ಲದ್ದಾಗಿತ್ತು" ಎಂಬುದನ್ನು ನಾವು ತಿರಸ್ಕರಿಸುತ್ತೇವೆ. ಅಂದರೆ ಸಾರಾಂಶವಾದದ್ದು, ಆದರೆ ವೈಯಕ್ತಿಕವಾದದ್ದಲ್ಲ. ಈ ದೃಷ್ಟಿ ಕೋನವನ್ನು ಪ್ರತಿಪಾದಿಸುವವರು ಯೇಸುವಿನ ಜೀವನದಲ್ಲಿ ಅನ್ವಯಿಸಲ್ಪಟ್ಟ ಮಿತಿಗಳಿಂದ, ಕುತೂಹಲಗಳಂಥವುಗಳಿಂದ ಗಲಿಬಿಲಿಗೊಂಡಿದ್ದಾರೆ. ನಿಶ್ಚಯವಾಗಿ, ನಿಜವಾಗಿ ಮಾನವನಾಗಿರುವುದು ಮಿತಿಗೊಳಿಸಲ್ಪಡುವದಾಗಿದೆಯೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಗುಣವನ್ನು ಯೇಸುವಿಗೆ ಅಲ್ಲಗಳೆಯುವುದು ಆತನ ನಿಜ ಮಾನವತೆಯನ್ನು ಅಲ್ಲಗಳೆಯುವುದು ಇಲ್ಲವೇ ಮಿತಿಗೊಳಿಸುವುದು ಆಗಿದೆ.

ಕುತೂಹಲವು ಜೀವನದ ಇಡೀ ವರ್ಣಪಂಕ್ತಿಯ ಮುಖಾಂತರ ಚಲಿಸುತ್ತದೆ. "ಮಧ್ಯಾಹನ್ನದ ಊಟಕ್ಕಾಗಿ ಏನಿದೆ?" ಎಂಬುದು ಕುತೂಹಲದ ಅನಿಶ್ಚಿತವಾದ ರೂಪ ವಾಗಿದೆ. "ಜೀವನದ ಅರ್ಥವು ಯಾವುದು?" ಎಂಬುದು ಗಾಢವಾದ ಪ್ರಶ್ನೆಯಾಗಿದೆ. "ಕ್ಷುಲ್ಲಕ ವಿವರಗಳು" ಎಂದು ಕರೆಯುವ ಯೇಸುವಿನ ಕುತೂಹಲದ ಬಗೆಗಿನ ದಾಖಲೆಯು ಆತನು ಮಾನವತೇ ಆಗಿದ್ದನು ಎಂಬುದನ್ನು ಜ್ಞಾಪಿಸಲಿಕ್ಕೆ ಸುವಾರ್ತೆಗಳ ಬರಹಗಾರರ ಎಚ್ಚರಿಕೆಯ ಪ್ರಯತ್ನವಾಗಿದೆ.

ಒಂದು ಸಂದರ್ಭದಲ್ಲಿ, ಯೇಸುವು ಐದು ಸಾವಿರ ಪುರುಷರಿಗೆ, ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಊಟ ಕೊಟ್ಟನು. ಆತನು ಅವರಿಗೆ ಊಟ ಮಾಡಿಸುವ ಮೊದಲು "ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ? ಹೋಗಿ ನೋಡಿರಿ!" (ನೋಡಿರಿ ಮಾರ್ಕ 6:35-38) ಎಂದು ಪ್ರಶ್ನಿಸಿದನು. ಈ ಪ್ರಶ್ನೆಯನ್ನು ಆತನು ಯಾಕೆ ಕೇಳಿದನು? ಅಪೊಸ್ತಲರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದನೋ? ಹಾಗಿದ್ದರೇ, "ಜನರ ಗುಂಪಿನೊಳಗೆ ಹೋಗಿರಿ, ಐದು ರೊಟ್ಟಿಗಳನ್ನು ಎರಡು ಮೀನುಗಳನ್ನು ಕಂಡುಕೊಂಡು, ಅವುಗಳನ್ನು ತೆಗೆದುಕೊಂಡು ಬನ್ನಿರಿ" ಎಂದು ಹೇಳುತ್ತಿದ್ದನು. ಜನರ ಗುಂಪಿನ ಮೇಲೆ ಪ್ರಭಾವ ಬೀರುವದಕ್ಕಾಗಿತ್ತೋ? ಅಪೊಸ್ತಲರಿಗೆ ಕೇಳಿದ ಪ್ರಶ್ನೆಯನ್ನು ಜನರ ಗುಂಪು ಕೇಳಿಸಿ ಕೊಂಡಿತೆಂಬುದಕ್ಕೆ ಯಾವುದೇ ಸೂಚನೆಯಿರುವದಿಲ್ಲ. ಆತನು ಪ್ರಶ್ನೆಯನ್ನು ಯಾಕೆ ಕೇಳಿದನು? ಆತನು ಮಾನವನಾಗಿದ್ದನು. ಬರಹಗಾರರು "ಮಾನವೀಕರಿಸುವದನ್ನು" ಯಾಕೆ "ಆತ್ಮೀಕರಿಸಬೇಕು."

ಯೇಸುವಿನ ತುಟಿಗಳಿಂದ ಬಂದ ಅತೀ ಆಶ್ಚರ್ಯಕರವಾದ ಪ್ರಶ್ನೆಗಳಲ್ಲಿ ಒಂದು, ಮಾರ್ಥ ಮತ್ತು ಲಾಜರನ ಸಹೋದರಿಯಾದ ಮರಿಯಳಿಗೆ ಕೇಳಲ್ಪಟ್ಟಿತು. ಲಾಜರನು ಸತ್ತುಹೋಗಿದ್ದನು ಮತ್ತು ಹೂಣಲ್ಪಟ್ಟಿದ್ದನು. ಆ ಸಮಯದಲ್ಲಿ ಬೇಥಾನ್ಯದಲ್ಲಿಯ ಇವರ ಮನೆಯಿಂದ ದೂರದಲ್ಲಿದ್ದ ಯೇಸುವಿಗೆ ಲಾಜರನು ಸಾಯುವ ಮೊದಲು ಅಸ್ವಸ್ಥತೆಯ ಬಗ್ಗೆ ತಿಳಿಸಲ್ಪಟ್ಟಿತು. ಯೇಸುವು ತಾನಿದ್ದಲ್ಲಿಯೇ ಎರಡು ದಿನ ನಿಂತುಕೊಂಡನು, ಆಗ ಲಾಜರನು ಸತ್ತು ಹೋಗಿದ್ದನೆಂದು ತನ್ನ ಶಿಷ್ಯರಿಗೆ ಯೇಸುವು ಹೇಳಿದನು. ಅವರೆಲ್ಲರೂ ಬೇಥಾನ್ಯಕ್ಕೆ ತಿರುಗಿ ಬಂದರು. ಯೇಸುವು ಮಾರ್ಥಳ ಮನೆಯನ್ನು ತಲುಪುವ ಮೊದಲು ಆಕೆ ಆತನನ್ನು ಸಂದರ್ಶಿಸಲು ಹೊರಗೆ ಬಂದಳು ಮತ್ತು ಆತನಿಂದ ಆದರಿಸಲ್ಪಟ್ಟಳು. ಆಗ ಆಕೆ ಮರಿಯಳ ಬಳಿಗೆ ಹೋಗಿ ಯೇಸುವು ಬಂದಿದ್ದಾನೆ ಮತ್ತು ಆಕೆಯನ್ನು ನೋಡಲು ಬಯಸುತ್ತಾನೆಂದು ಹೇಳಿದಳು. ಆಕೆಯ ಮತ್ತು ಆಕೆಯೊಂದಿಗಿದ್ದ ಇತರರ ದುಃಖವನ್ನು ಯೇಸುವು ನೋಡಿದಾಗ ಆತನು ಬಹಳವಾಗಿ ನೊಂದುಕೊಂಡನು. "ಅವನನ್ನು ಎಲ್ಲಿ ಇಟ್ಟಿದ್ದೀರಿ?" ಎಂದು ಆತನು ಕೇಳಿದನು (ಯೋಹಾನ 11:34). ಸಮಾಧಿಯ ಬಳಿಗೆ ಬಂದಾಗ "ಯೇಸುವು ಅತ್ತನು" (ಯೋಹಾನ 11:35) ಎಂದು ನಮಗೆ ಹೇಳಲ್ಪಟ್ಟಿದೆ. ಎಂಥಾ ಕನಿಕರ! ಎಂಥಾ ಪ್ರೀತಿ! ಎಂಥಾ ಸಹಾನುಭೂತಿ! ಎಂಥಾ ಮಾನವತೆ! ಈ ವಾಕ್ಯದ ಬಗ್ಗೆ "ಎಲ್ಲಾ ಸುವಾರ್ತೆಗಳಲ್ಲಿ ಕಂಡು ಬರುವ ಆತನ

ಮಾನವ ಸ್ವಭಾವದ ಮೃದುವಾದ ವಿವರಣೆಯಲ್ಲಿ ಆತನ [ಯೇಸುವಿನ] ದುಃಖವನ್ನು ಸುವಾರ್ತಿಕನು ವಿವರಿಸಿದ್ದಾನೆ. 'ಯೇಸುವು ಅತ್ತನು' ಎಂದು ಹೇಳಲ್ಪಟ್ಟಿದೆ.[2] ಇದಕ್ಕೆ ನಾವು "ಆಮೆನ್!" ಎಂದು ಹೇಳಬಹುದು. ಈ ವಾಕ್ಯದೊಳಗಿನ ಆತನ ಮಾನವತೆಯು ಹೊಳೆಯುವ ಕುರುಹುಗಳ ಮಧ್ಯದಲ್ಲಿ ಕನಿಷ್ಠವಾದದ್ದಲ್ಲ. ಆದಾಗ್ಯೂ "ಅವನನ್ನು ಎಲ್ಲಿಟ್ಟಿದ್ದೀರಿ?" (ಯೋಹಾನ 11:1-36) ಎಂಬ ಯಥಾರ್ಥವಾದ ಮಗುವಿನಂಥ ಪ್ರಶ್ನೆಯಾಗಿದೆ.

ತನ್ನ ದೇಹ ಮತ್ತು ಭಾವನೆಗಳಲ್ಲಿ ಆತನು ನಿಜವಾಗಿಯೂ ಮಾನವನಾಗಿರುವದನ್ನು ಯೇಸುವು ಪ್ರದರ್ಶಿಸಿದನು. ಯೇಸುವಿನ ಮಾನವತೆಯ ಬಗ್ಗೆ "ವೈಯಕ್ತಿಕವಲ್ಲದ್ದು" ಯಾವುದೂ ಇರಲಿಲ್ಲ. ಆತನ ಮಾನವತೆಯು ಬುದ್ಧಿಯುಳ್ಳ ಮುಂಭಾಗವಾಗಿರಲಿಲ್ಲ. ಅದು ಆತನ ದೇವತ್ವದಂತೆಯೇ ನಿಜವಾದದ್ದೂ ಸತ್ಯವಾದದ್ದೂ ಆಗಿತ್ತು.

---

ಟಿಪ್ಪಣಿಗಳು

[1]Edward W. Goodrick and John R. Kohlenberger III, eds., *The NIV Exhaustive Concordance* (Grand Rapids, Mich.: Zondervan, 1990), 1546-47. [2]Wilbert F. Howard, *The Interpreter's Bible,* ed. George Arthur Buttrick (New York: Abingdon Press, 1952), 8:646.

© 2009 Truth for Today

## ನಮ್ಮ ಮಾನವ ಭಾಗಗಳು

ಧರ್ಮೋಪದೇಶಕಾಂಡ 6:4, 5; ಯಾಜಕಕಾಂಡ 19:10ಬಿ; ಮಾರ್ಕ 12:29-31

---

ಭಾವನಾತ್ಮಕ ಭಾವನೆಗೆ ಸಂಬಂಧಿಸಿದ
"ಹೃದಯ" *(Kardia)*
ಮಾರ್ಕ 12:30

ದೈಹಿಕ/ಭೌತಿಕ

ದೈಹಿಕ
"ಬಲ" *(ischus)*
ಮಾರ್ಕ 12:30
"ಮಾಂಸ" *(sarx)*
ಲೂಕ 24:39

ಆತ್ಮಿಕ/ಭೌತಿಕವಲ್ಲದ

ಆತ್ಮ *(pneuma)*
ಮತ್ತಾಯ 26:41

"ಪ್ರಾಣ" *(psuche)*
ಮಾರ್ಕ 12:30

ಮಾನಸಿಕ, ಸ್ವೇಚ್ಛಾಶಕ್ತಿಯ
"ಮನಸ್ಸು" *(dianoia)*
ಮಾರ್ಕ 12:30
(ಸ್ವೇಚ್ಛಾ ಶಕ್ತಿಯ) ಎಫೆಸ 2:3

ಸಮಾಜಿಕ
"ನೆರೆಯವ" *(plesion)*
ಮಾರ್ಕ 12:31
"ಅನ್ಯೋನ್ಯತೆ" *(koinonia)*
ಅಪೊಸ್ತಲರ ಕೃತ್ಯ 2:42



© 2009 Truth for Today